ನಮ್ಮ ಮೆಟ್ರೋ ಕಾಮಗಾರಿಗಳ ಪ್ರಗತಿ

448 : (320)

ಶ್ರೀ ರಾಮಲಿಂಗಾ ರೆಡ್ಡಿ (ಬಿಟಿಎಂ ಲೇಔಟ್)

ಅ) ಇಲ್ಲಿಯವರೆಗೆ ಪ್ರಗತಿಯಲ್ಲಿರುವ ನಮ್ಮ ಮೆಟ್ರೋ ಕಾಮಗಾರಿಗಳ ವಿವರ ನೀಡುವುದು)?

ಆ) ನಮ್ಮ ಮೆಟ್ರೋದ ಉತ್ತರ–ದಕ್ಷಿಣ ಕಾರಿಡಾಲ್‌ಗಳ ಸುರಂಗ ಕಾಮಗಾರಿಗಳು ಯಾವ ಹಂತದಲ್ಲಿದೆ?

ಇ) ಇಲ್ಲಿಯವರೆಗೆ ನಮ್ಮ ಮೆಟ್ರೋ ಪೂರ್ಣಗೊಳಿಸಿರುವ ಕಾಮಗಾರಿಗಳು ಯಾವುವು?

ಈ) 2013ರಲ್ಲಿ ಯಾವ ಮಾರ್ಗದಲ್ಲಿ ಮೆಟ್ರೋ ರೈಲು ಸಂಚಾರ ಪ್ರಾರಂಭವಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಂಗಳೂರು ನಗರದಲ್ಲಿ ಸದ್ಯ ಮೆಟ್ರೋ ರೈಲು ಯೋಜನೆಯ ಹಂತ–1ರ ಅನುಷ್ಠಾನವು ಪ್ರಗತಿಯಲ್ಲಿದೆ. ಬಿಎಂಆರ್‌ಸಿಎಲ್, ಮೆಟ್ರೋ ರೈಲು ಯೋಜನೆಯ ಹಂತ–1ನ್ನು ಉತ್ತಮವಾಗಿ ಅನುಷ್ಠಾನಗೊಳಿಸುತ್ತಿದ್ದು, ರೀಚ್–1ರ ಬೈಯ್ಯಪ್ಪನ ಹಳ್ಳಿಯಿಂದ ಎಂ.ಜಿ.ರಸ್ತೆವರೆಗಿನ 6.75 ಕಿ.ಮೀ.ನ ಯೋಜನೆ ಪೂರ್ಣಗೊಂಡಿದ್ದು, ದಿನಾಂಕ:20.10–2011ರಂದು ಸಾರ್ವಜ–ನಿಕರ ಓಡಾಟಕ್ಕಾಗಿ ಕಾರ್ಯರಂಭಮಾಡಿರುತ್ತದೆ. 42.3 ಕಿ.ಮೀ ಉದ್ದದ ಹಂತ–1ರ ಉಳಿದೆಲ್ಲಾ ರೀಚ್‌ಗಳಲ್ಲಿನ ಕಾಮಗಾರಿಗಳು ಭರದಿಂದ ಸಾಗಿವೆ. ಈ ಯೋಜನೆಯ ವಿವಿಧ ರೀಚ್‌ಗಳ ವಿವರ ಮತ್ತು ಭೌತಿಕ ಪ್ರಗತಿಯು ಅಕ್ಟೋಬರ್ 2012ರ ಕೊನೆಯಲ್ಲಿ ಈ ಕೆಳಗಿನಂತಿದೆ.

ರೀಚ್	ಮಾರ್ಗ	ಭೌತಿಕ ಪ್ರಗತಿ	
		ವಯಾಡಕ್ಟ್ %	ನಿಲ್ದಾಣಗಳು %
ರೀಚ್–1	ಬೈಯ್ಯಪ್ಪನಹಳ್ಳಿಯಿಂದ ಮಹಾತ್ಮಾ ಗಾಂಧಿ ರಸ್ತೆ	ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗಿದೆ.	
ರೀಚ್–2	ಕುಷ್ಠರೋಗ ಆಸ್ಪತ್ರೆಯಿಂದ ಮೈಸೂರು ರಸ್ತೆ ಟರ್ಮಿನಲ್	96%	58%
ರೀಚ್–3	ಸ್ವಸ್ತಿಕ್ ನಿಂದ ಯಶವಂತಪುರದವರೆಗೆ	96%	65%
ರೀಚ್–3ಎ	ಯಶವಂತಪುರದಿಂದ ಪೀಣ್ಯ ಡಿಪೋದವರೆಗೆ	94%	56%
ರೀಚ್–3ಬಿ	ಪೀಣ್ಯ ಹಳ್ಳಿಯಿಂದ ಹೆಸರಘಟ್ಟ ಕ್ರಾಸ್‌ವರೆಗೆ	89%	42%
ರೀಚ್–4	ಕೆ.ಆರ್.ರಸ್ತೆಯಿಂದ ಆರ್.ವಿ.ರಸ್ತೆಯ ಕೊನೆಯವರೆಗೆ	99%	81%
ರೀಚ್–4ಎ	ಆರ್.ವಿ.ರಸ್ತೆಯಿಂದ ಪುಟ್ಟೇನಹಳ್ಳಿ ಕ್ರಾಸ್‌ವರೆಗೆ	97%	44%
ಯು.ಜಿ–1	ಸ್ವಸ್ತಿಕ್‌ನಿಂದ ಕೆ.ಆರ್. ಮಾರ್ಕೆಟ್‌ವರೆಗೆ	(ಟನೆಲಿಂಗ್)	17%
ಯು.ಜಿ–2	ಕ್ರಿಕೆಟ್ ಸ್ಟೇಡಿಯಂನಿಂದ ಕುಷ್ಠರೋಗ ಆಸ್ಪತ್ರೆವರೆಗೆ	(ಟನೆಲಿಂಗ್)	48%

ಒಟ್ಟಾರೆ ಅಕ್ಟೋಬರ್ – 2012ರ ಅಂತ್ಯದಲ್ಲಿ ಭೌತಿಕ ಪ್ರಗತಿ ಶೇ.64 ರಷ್ಟು ಮತ್ತು ಆರ್ಥಿಕ ಪ್ರಗತಿ ಶೇ.67ರಷ್ಟು ಆಗಿದೆ.

ಆ) ನಮ್ಮ ಮೆಟ್ರೋದ ಉತ್ತರ–ದಕ್ಷಿಣ ಕಾರಿಡಾಲ್‌ಗಳ ಸುರಂಗ ಮಾರ್ಗದಲ್ಲಿ ಪೈಲಿಂಗ್ ಕಾರ್ಯವು ಪ್ರಗತಿಯಲ್ಲಿದೆ. ಶೇ. 17ರಷ್ಟು ಕಾಮಗಾರಿ ಮುಗಿದಿದೆ. ಈ ಮಾರ್ಗದಲ್ಲಿ ದಿನಾಂಕ: 19.10.2012ರಂದು ಸುರಂಗದ ಕಾಮಗಾರಿಯೂ ದಕ್ಷಿಣ ಮಾರ್ಗದಿಂದ ಶುರುವಾಗಿದೆ.

ಇ) ಬಿಎಂಆರ್‌ಸಿಎಲ್, ಮೆಟ್ರೋ ರೈಲು ಯೋಜನೆಯ ಹಂತ–1ನ್ನು ಉತ್ತಮವಾಗಿ ಅನುಷ್ಠಾನಗೊಳಿಸುತ್ತಿದ್ದು, ರೀಚ್–1ರ ಬೈಯ್ಯಪ್ಪನ ಹಳ್ಳಿಯಿಂದ ಎಂ.ಜಿ.ರಸ್ತೆವರೆಗಿನ 6.75 ಕಿ.ಮೀ.ನ ಯೋಜನೆ ಪೂರ್ಣಗೊಂಡಿದ್ದು, ದಿನಾಂಕ: 20.10.2011ರಂದು ಸಾರ್ವಜನಿಕರ ಓಡಾಟಕ್ಕಾಗಿ ಕಾರ್ಯಾರಂಭಮಾಡಿರುತ್ತದೆ.

ಈ) 2013ರಲ್ಲಿ ರೀಚ್–3 ಮತ್ತು 3ಎ ಅಂದರೆ ಪೀಣ್ಯ ದಿಂದ ಸಂಪಿಗೆ ರಸ್ತೆ ನಿಲ್ದಾಣದವರೆಗಿನ 10.54 ಕಿ.ಮೀ. ಗಳ ಉದ್ದದ 10 ನಿಲ್ದಾಣಗಳನ್ನೊಳಗೊಂಡ ಮಾರ್ಗದಲ್ಲಿ ಮೆಟ್ರೋ ರೈಲು ಸಂಚಾರ ಪ್ರಾರಂಭವಾಗುವುದು.

ಬಿಡುಗಡೆಗೊಂಡ ಅನುದಾನ

418 : (632)

ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು)

ಅ) ಸರ್ಕಾರದಿಂದ ಹುಣಸೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆಯ ಅಭಿವೃದ್ಧಿಗಾಗಿ 2008–09ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ ಬಿಡುಗಡೆಯಾದ ಅನುದಾನವೆಷ್ಟು?

ಆ) ಹುಣಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ 2008–09 ರಿಂದ ಈ ತಹಲ್‌ವರೆಗೆ ಯಾವ ಯಾವ ಅಭಿವೃದ್ಧಿ ಕಾಮಗಾರಿ/ಯೋಜನೆಗಳನ್ನು ಕೈಗೊಳ್ಳಲಾಗಿದೆ?

ಇ) ಈ ಕಾಮಗಾರಿಗಳಿಗೆ ಮಂಜೂರಾದ ಹಣವೆಷ್ಟು?